‘ಇವರ ಮನೆಗೆ ರಾಬರಿ ಮಾಡುವ ಉದ್ದೇಶದಿಂದ ಯಾರೋ ಬಂದಿದ್ದರೆ, ಬಾಗಿಲು ತೆರೆದ ಅಡುಗೆಯವನನ್ನು ಯಾಕೆ ಕೊಲೆ ಮಾಡಿದರು?’

★★★

“ಸರ್ ನಾನೂ ಮತ್ತು ನಿರ್ಮಲ್ ಜಗಳ ಆಡಿಕೊಂಡಿದ್ದು ಹೌದು. ಪಾರ್ಟನರ್‌ಶಿಪ್ ಹಿಂದಕ್ಕೆ ತೆದುಕೊಳ್ಳುತ್ತೇನೆ ಅಂತಾ ಹೇಳಿದ್ದೂ ಹೌದು. ನನಗೆ ಕ್ಯಾಶ್ ಬೇಕು ಅಂತ ಹೇಳಿದ್ದೂ ಹೌದು. ಆದರೆ ಆ ಜುಜುಬಿ 17 ಲಕ್ಷಕ್ಕೆ ಅವನ ಮನೆಗೆ ನುಗ್ಗಿ, ಯಾರೋ ಗೊತ್ತು ಗುರಿಯಿರದವನನ್ನು ಕೊಲೆ ಮಾಡಿ ಹಣ ಕದ್ದಿದ್ದೇನೆ ಅಂತಾ ಆರೋಪ ಮಾಡ್ತಾ ಇದಿರಾ?” ಜಯರಾಂ ಧನಂಜಯನ ಮುಂದಿದ್ದ ಟೇಬಲ್‌ನ್ನು ಕುಟ್ಟಿ ಕೇಳಿದ. ಕೋಪ ಅವನ ಮುಖದಲ್ಲಿ ತುಂಬಿ ತುಳುಕುತ್ತಿತ್ತು. ಅವನ ಕೋಪವನ್ನು ಶಮನಗೊಳಿಸುತ್ತ, ಜಯರಾಂನ ಲಾಯರ್...

“ನೋಡಿ ಆಫೀಸರ್... ಇವರಿಗೆ ಹದಿನೇಳು ಲಕ್ಷ ದೊಡ್ಡದಲ್ಲ. ಅದಕ್ಕೆ ಕೊಲೆ, ರಾಬರಿಯಂಥಾ ಹೀನ ಕೃತ್ಯ ಮಾಡಿರಬಹುದು ಅನ್ನುವ ಆರೋಪ ಸರಿಯಲ್ಲ.”

“ದ್ವೇಷ ಅನ್ನೋದು ಎಲ್ಲದನ್ನು ಸಾಧ್ಯವಾಗಿಸುತ್ತದೆ. ಅದು ಒಮ್ಮೆ ತಲೆಯಲ್ಲಿ ಹೊಕ್ಕಿದರೆ ಆಯಿತು. ಅವಕಾಶ ಬಿಟ್ಟರೆ ಇನ್ನೇನನ್ನೂ ನೋಡುವುದಿಲ್ಲ. ನನ್ನ ಸರ್ವಿಸ್‌ನಲ್ಲಿ ಹತ್ತು ಇಪ್ಪತ್ತು ರೂಪಾಯಿಗೆ ಕೊಲೆ ಮಾಡಿದವನ್ನು ನೋಡಿದ್ದೇನೆ. ಅಲ್ಲಿಯೂ ಕೂಡಾ ಜುಜುಬಿ ಹತ್ತು ರೂಪಾಯಿ ಅಲ್ಲ... ದ್ವೇಷ ಆ ಕೊಲೆಗಳಿಗೆ ಕಾರಣ.”

“ನನ್ನ ಕ್ಲೈಂಟ್ ಮೇಲೆ ಆರೋಪ ಮಾಡುತ್ತಿದ್ದಿರಾ? ಅದಕ್ಕೆ ಸಾಕ್ಷಿ ಇದೆಯಾ?” ಎಂದ ಲಾಯರ್.

ಅವನ ಮಾತುಗಳನ್ನು ಅಲ್ಲಿಯೇ ತಡೆಯುತ್ತಾ ಜಯರಾಂ,

“ನನಗೆ ನಿರ್ಮಲ್ ಮೇಲೆ ದ್ವೇಷ ಇತ್ತು ನಿಜ. ನಾನೇ ಕರೆದು ಸೇರಿಸಿಕೊಂಡವ ನನ್ನನ್ನು ಮೀರಿ ಬೆಳೆದ ಅಂತಾ ದ್ವೇಷ, ನನ್ನ ಎಲ್ಲಾ ಸಪ್ಲೈಯರ್ಸ್, ಕಸ್ಟಮರ್ಸ್ ಅವನ ಬಳಿ ಮಾತ್ರ ವ್ಯವಹಾರ ಮಾಡಲು ಬಯಸುತ್ತಿದ್ದರು ಅಂತಾ ಅಸೂಯೆ ಇದ್ದಿದ್ದು ಹೌದು. ಅದಕ್ಕೇ ಅವನ ಸಹವಾಸವೇ ಬೇಡ ಅಂತಾ ಮನಸ್ಸು ಮಾಡಿದ್ದೆ. ಅಷ್ಟು ಮಾತ್ರಕ್ಕೆ ಅವನ ಮನೆ ರಾಬರಿ ಯಾಕೆ ಮಾಡಿಸಬೇಕು? ಅವನ ಮನೆಯ ಅಡುಗೆಯವನನ್ನು ಯಾಕೆ ಕೊಲೆ ಮಾಡಿಸಬೇಕು? ಅಷ್ಟಕ್ಕೂ ಅವನ ಮನೆಯಲ್ಲಿ ಅಡುಗೆಯವನು ಇದ್ದ ಅಂತಾ ಕೂಡಾ ಗೊತ್ತಿಲ್ಲ. ಗೂಬೆಗಳಂತೆ ಗಂಡಹೆಂಡತಿ ಇಬ್ಬರೇ ಇದ್ದರು. ಯಾರನ್ನೂ ಸೇರಿಸುತ್ತಿರಲಿಲ್ಲ, ಯಾರೊಂದಿಗೂ ಮಾತಾಡುತ್ತಿರಲಿಲ್ಲ. ಅಂಥವರಿಗೆ ಅಡುಗೆಯವ ಯಾಕೆ ಬೇಕಿತ್ತು? ಈ ಘಟನೆ ನನ್ನ ತಲೆಗೆ ಕಟ್ಟಿ, ಜೈಲಿಗೆ ಕಳುಹಿಸಿದರೆ ಎಲ್ಲಾ ಅವನೊಬ್ಬನಿಗೆ ಮಾತ್ರ ಸಿಗುತ್ತದೆ ಅಂತಾ ಯಾಕೆ ನಿರ್ಮಲ್ ಮಾಡಿರಬಾರದು? ಇನ್ನೂ ವಿಷಯ ಬೇಕಿದ್ದರೆ ಮತ್ತೆ ಕರೆಯಿರಿ ಬರುತ್ತೇನೆ” ಎಂದು ಸಿಟ್ಟಿನಿಂದ ಅಲ್ಲಿಂದೆದ್ದು ಹೊರಟ. ಜಯರಾಂ ಹೊರಟಿದ್ದು ಧನಂಜಯನಿಗೆ ತಿಳಿಯಲಿಲ್ಲ. ಅವನ ಮನಸ್ಸೆಲ್ಲಾ ಆ ಮಾತುಗಳ ಮೇಲೆಯೇ ನಿಂತಿತ್ತು.



‘ಯಾರನ್ನೂ ಸೇರಿಸಿಕೊಳ್ಳದವರು... ಸಡನ್ ಆಗಿ ಅಡುಗೆಯವನನ್ನು ಯಾಕೆ ಸೇರಿಸಿಕೊಂಡರು?’

ಅದೇ ಆಲೋಚನೆಯಲ್ಲಿದ್ದವನಿಗೆ ಇನ್‌ಸ್ಪೆಕ್ಟರ್ ರವಿಯ ಮಾತುಗಳು ವಾಸ್ತವಕ್ಕೆ ಎಳೆದವು...

“ಸರ್... ಒಂದು ಬ್ರೇಕ್ ಥ್ರೂ... ಕಾಲೋನಿಯಿಂದ ಸುಮಾರು ನೂರು ಮೀಟರ್ ದೂರದಲ್ಲಿದ್ದ ಒಂದು ಸಣ್ಣ ಸೂಪರ್ ಮಾರ್ಕೆಟ್ ಕ್ಯಾಮರಾದಲ್ಲಿ... ಇಬ್ಬರು ಮುಸುಕುಧಾರಿಗಳು ಐದು ಗಂಟೆಗೆ